**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:21-06-2023**

ಪಾಟೀ ಸವಾಲುಃ ಶ್ರೀ ಟಿ ಎಂ ಎ ವಕೀಲರಿಂದ

ನಾನು ಬಿ ಎಸ್ ಸಿ ಪದವೀಧರ. ನಾನು ಹಣಕಾಸಿನ ವ್ಯವಹಾರದ ಬಗ್ಗೆ ಆದಾಯ ತೆರಿಗೆ ಕಾಯ್ದೆ ನಿಯಮಗಳನ್ನು ತಿಳಿದುಕೊಂಡಿರುತ್ತೇನೆ. ನನಗೆ ಕಾಫಿ ಬೆಳೆಯಿಂದ ವಾರ್ಷಿಕ **15** ಲಕ್ಷ ವರಮಾನ ಇದೆ. ಕಾಫಿ ಬೆಳೆಗಾರರಿಗೆ ಆದಾಯ ತೆರಿಗೆಯಿಂದ ರಿಯಾಯಿತಿ ಇದೆ.

ಆರೋಪಿ ಗಂಡ ದಿನೇಶ್ ರವರು ನನಗೆ **25** ವರ್ಷಗಳಿಂದ ಪರಿಚಯ. ಆರೋಪಿ ಗಂಡನ ಹೆಸರಿನಲ್ಲಿ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಹಣ ಕೊಡುವುದು ಮತ್ತು ತೆಗೆದುಕೊಳ್ಳುವ ವ್ಯವಹಾರ ಇದೆ. ನಾನು ಈ ಬಗ್ಗೆ **4-5** ಬಾರಿ ವ್ಯವಹಾರ ಮಾಡಿರುತ್ತೇನೆ. ನಾನು ಹಣಕಾಸಿನ ವ್ಯವಹಾರ ಮಾಡಿದಾಗ ಆರೋಪಿ ಗಂಡನಿಂದ ಯಾವುದೇ ಚೆಕ್ ಮತ್ತು ಕಾಗದ ಪತ್ರಗಳನ್ನು ಮಾಡಿಸಿಕೊಂಡಿರುವುದಿಲ್ಲ. ಆರೋಪಿಯ ಗಂಡನಿಗೆ ಸಂಬಂಧಿಸಿದ ಖಾಲಿ ಚೆಕ್ ಅಥವಾ ಖಾಲಿ ಬಾಂಡ್ ನನ್ನ ಬಳಿ ಇಲ್ಲ. ನಾನು ಆರೋಪಿಗೆ ಮೊದಲು **01** ಲಕ್ಷದ **10** ಸಾವಿರ ರೂ ಹಣ ಸಾಲ ಕೊಟ್ಟಿದ್ದು ಆ ಕಾಲಕ್ಕೆ ಭದ್ರತೆಗಾಗಿ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ದಿಃ **10-02-2021** ರಂದು ನಾನು ಆರೋಪಿಗೆ ನಾಲ್ಕೂವರೆ ಲಕ್ಷ ಸಾಲ ಕೊಟ್ಟಿರುತ್ತೇನೆ. ಆರೋಪಿಗೆ ನಾನು ಹಣ ಕೊಟ್ಟಾಗ ಸಂಜೆ **5.30** ಗಂಟೆ ಆಗಿತ್ತು ಆಗ ನಾನು ಒಬ್ಬನೇ ಇದ್ದೆನು. ಆರೋಪಿ ನನ್ನ ಬಳಿ ಹಣ ಪಡೆದ ಕಾಲಕ್ಕೆ ಅದೇ ದಿನ ದಿಃ **08-07-2021** ರ ದಿನಾಂಕ ನಮೂದಿಸಿ ಚೆಕ್ಕನ್ನು ನೀಡಿರುತ್ತಾರೆ.

ನಾನು ಆರೋಪಿಗೆ **4,50,000/-** ರೂ ಹಣ ಕೊಡಲು ದಿಃ **06-02-2021** ರಂದು ಮತ್ತು **10-02-2021** ರಂದು ವಿಜಯಾ ಬ್ಯಾಂಕ್, ದೇವಲಕೆರೆ ಶಾಖೆಯಿಂದ ಹಣವನ್ನು ತಂದಿರುತ್ತೇನೆ. ನಿಪಿ-**1** ರಲ್ಲಿ ಇರುವ ಬರವಣಿಗೆ ಮತ್ತು ಸಹಿ ಯನ್ನು ನನ್ನ ಮುಂದೆ ಬರೆದಿರುವುದಿಲ್ಲ. ನಿಪಿ-**1**

ರಲ್ಲಿರುವ ಬರವಣಿಗೆ ಮತ್ತು ಸಹಿ ಆರೋಪಿಯದ್ದಲ್ಲ ಸಾಕ್ಷಿದಾರರು ನಿಪಿ-1 ಚೆಕ್ಕನ್ನು ಹಣ ಮರುಪಾವತಿಗಾಗಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ರ ಬ್ಯಾಂಕ್ ನ ಷರಾದಲ್ಲಿ 19 ಎ ಎಂದು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಂತೆ ನಾನು ಆರೋಪಿಗೆ ನೋಟೀಸ್ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಏಳು ಲಕ್ಷ ಸಾಲ ನನಗೆ ಇದೆ ಎಂದು ನಮೂದು ಇದೆ ಎಂದರೆ ಸರಿ. ನಿಪಿ-8 ರಿಂದ 10 ಆರ್ ಟಿ ಸಿ ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ, ನನ್ನ ತಂಗಿಯ ಹೆಸರಿನಲ್ಲಿ ಇದೆ.

ಆರೋಪಿ ನನ್ನ ಬಳಿ ಬಂದಿರುವುದಿಲ್ಲ ಮತ್ತು ನನ್ನ ಬಳಿ 4,50,000/- ರೂ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಗಂಡ ಆತನಿಗೆ ಸೇರಿದ ಖಾಲಿ ಚೆಕ್ಕು ಮತ್ತು ಖಾಲಿ ಬಾಂಡ್ ಪೇಪರ್ ಅನ್ನು ಮತ್ತು ಆರೋಪಿಗೆ ಸೇರಿದ ಚೆಕ್ಕು ಮತ್ತು ಪೇಪರ್ ಹಿಂದಿರುಗಿಸುವಂತೆ ವಕೀಲರ ಮೂಲಕ ನೋಟೀಸ್ ನೀಡಿದ್ದರು ಎಂದರೆ ಸಾಕ್ಷಿದಾರರು 1,10,000/- ರೂ ಗಳಿಗೆ ಸಂಬಂಧಿಸಿದಂತೆ ಅವರು ನೋಟೀಸ್ ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿ ಗಂಡ 1,10,000/- ರೂ ಹಣ ಪಡೆದುಕೊಂಡಾಗ ಭದ್ರತೆಗಾಗಿ ಕೊಟ್ಟ ಖಾಲಿ ಚೆಕ್ಕು ಮತ್ತು ಖಾಲಿ ಬಾಂಡ್ ಪೇಪರನ್ನು ಪಡೆದು ಚೆಕ್ಕನ್ನು ಭರ್ತಿ ಮಾಡಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಗಂಡ ಕೊಟ್ಟ ನೋಟೀಸ್ ಗೆ ಆರೋಪಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀಡಿದ ನೋಟೀಸ್ ಗೆ ಮರು ಉತ್ತರ ಕೊಟ್ಟಿರುತ್ತೇನೆ. ಮೊದಲಿಗೆ ಆರೋಪಿ ಗಂಡ ನನಗೆ ನೋಟೀಸ್ ನೀಡಿರುತ್ತಾರೆ , ನಂತರ ನಾನು ಆರೋಪಿಗೆ ನೋಟೀಸ್ ನೀಡಿರುತ್ತೇನೆ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದಿಲ್ಲ, ಸಾಲದ ಭದ್ರತೆಗಾಗಿ ನಿಪಿ-1 ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪಿರ್ಯಾದನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಜೆ.ಎಂ.ಎಫ್.ಸಿ,**
ಸಕಲೇಶಪುರ